## ಸಕಾರಣ!

ಗೆಳತಿಯ ಮಗಳು ಅರಗಿಣಿಗೆ ಅಂಗನವಾಡಿಗೆ ಭರ್ತಿ ಮಾಡಿ ನಾಲ್ಕು ದಿನವಾಗಿತ್ತು. ದಿನವೂ ಅಲ್ಲಿನ ರಿಪೋರ್ಟ್ ಕೊಡುತ್ತಿದ್ದು; ಮಿಸ್ಸು,'ಗಿಣಿ ಗಿಣಿ ಎಂದು ಮುದ್ದು ಮಾಡುತ್ತಾರೆ ನಂಗೆ ಗೊತ್ತಾ?' ಅಂದಿದ್ದಳಂತೆ ಅವಳ ಅಮ್ಮನ ಬಳಿ.

ಅಂದು ಅಮ್ಮ– ಮಗಳು ನಮ್ಮಲ್ಲಿಗೆ ಬಂದಾಗ ಗಿಣಿಗೆ ಹಸಿವಾಗಿತ್ತೆಂದು ತಿಂಡಿ ಕೊಟ್ಟೆ. ಅವಳು ತಿನ್ನುವಾಗ ಅಂಗನವಾಡಿ ಬಗ್ಗೆ ವಿಚಾರಿಸಿದೆ ಏನೇನು ಹೇಳಿ ಕೊಡ್ತಾರೆ? ಆಟ, ಪಾಠ ಯಾವುದು? ಊಟಕ್ಕೆ? ಮುಂತಾಗಿ.

ತಿಂಡಿ ತಿನ್ನುತ್ತಾ ಅಲ್ಲಿನ ಬೆಳಗಿನ ಪ್ರಾರ್ಥನೆ, ಪಾಠದ ಬಗ್ಗೆ ಹೇಳುತ್ತಾ, ಒಂದೇ ಸಮನೆ ಜೋರಾಗಿ ಅಳಲು ಶುರುಮಾಡಿದಳು. 'ತಿಂಡಿ ಕಾರ ಆಯ್ತಾ? ಮೆಣಸು ತಿಂದೆಯಾ? ಇನ್ನೂ ಬೇಕಾ? ಮುಂತಾಗಿ ವಿಚಾರಿಸಿದೆನು. ಅದಕ್ಕವಳು, 'ನಂಗೆ ದಿನವೂ ಮುದ್ದು ಮಾಡುವ ಮಿಸ್ಸು ಇವತ್ತು ಬೈದರು. ಬಾಲ ಬಿಚ್ಚೇಯಾ? ಕೊಡ್ತೇನಿ ನೋಡು' ಎಂದರು. ನೀವು ಕೊಟ್ಟ ತಿಂಡಿ ಚೆನ್ನಾಗಿದೆ. ಅದಕ್ಕೆ ಅತ್ತಿದ್ದಲ್ಲ ನಾನು, ತಿಂತಾ ಇದೀನಿ ನೋಡಿ' ಎಂದು, ಮಿಸ್ಸಿನ ಬಗ್ಗೆ ಪುಕಾರು ಹೇಳಿತು. ಸದ್ಯ ನಾವು ಬಚಾವಾಗಿದ್ದೆವು!.



**ಪೂರ್ಣಿಮಾ ಎಚ್.ಎನ್.**

---



ಕಲೆ: ಗಣೇಶ ಆಚಾರ್ಯ

## ಮಾಸ್ತಿಕಟ್ಟೆ ಕರೆಂಟ್ ಬೇಡ!

ಹಿಂದಿನ ದಿನ ನಮ್ಮೂರಲ್ಲಿ ಹಳ್ಳಿಯ ಲೈಟ್ ಕಂಬ ಬದಲಾವಣೆಗೆ ಜೋಗದ (ಶರಾವತಿ) ಕರೆಂಟ್ ಲೈನ್ ಬದಲು, ಮಾಸ್ತಿಕಟ್ಟೆಯ (ವಾರಾಹಿ) ಲೈನ್ ಚಾರ್ಜ್ ಮಾಡಿದ್ದರು. ಅದರಿಂದ ವೋಲ್ಟೇಜ್ ಡ್ರಾಪ್ ಆಗಿದ್ದು ಪಂಪ್‌ಸೆಟ್ , ಗ್ರೈಂಡರ್ ಆನ್ ಆಗುತ್ತಿರಲಿಲ್ಲ.

ಎಲೆಕ್ಟ್ರಿಷಿಯನ್ ನನ್ನ ಬಳಿ ಈ ಬಗ್ಗೆ ಹೇಳಿದ್ದನ್ನು ಅಜ್ಜಿ ಕೇಳಿಸಿಕೊಂಡಿದ್ದರು. ಮಾರನೇ ದಿನ ಮೆಸ್ಕಾಂ ಮೀಟರ್ ರೀಡರ್ ಮನೆಗೆ ಬಂದಾಗ ಅಜ್ಜಿ ಆತನ ಬಳಿ 'ನಮಗೆ ಯಾವುದೇ ಕಾರಣಕ್ಕೂ ಮಾಸ್ತಿಕಟ್ಟೆ ಕರೆಂಟ್ ಬೇಡ!; ಅದು ಸರಿಯಿಲ್ಲ. ಸಾಗರದ್ದೇ ಇರಲಿ; ಎಂಥಾ ಕಾಲ ಬಂತಪ್ಪಾ, ಕರೆಂಟಲ್ಲೂ ಮೋಸ!, ಎಂಜಿನಿಯರ್‌ಗೆ ಹೇಳು' ಎಂದಾಗ ಮೀಟರ್ ರೀಡರ್ ಜೊತೆ ನಾವೂ ನಕ್ಕೆವು.

**ನಗರ ಗುರುದೇವ್ ಭಂಡಾರ್ಕರ್**